Question of Privilege against the Mayor, Bangalore City Corporation

ಶ್ರೀ ವಾಟಾಳ್ ನಾಗರಾಜ್.—ಕಾರ್ಪೊರೇಷನ್ ಮೇಯರ್ ಬಗ್ಗೆ ನಾನು 8-9 ದಿವಸಗಳ ಹಿಂದೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೆ. ತಾವು ನೋಡುತ್ತೇನೆ ಎಂದು ಹೇಳಿದ್ದಿರಿ. ಇನ್ನೂವರೆಗೆ ಅದನ್ನು ತೆಗೆದುಕೊಂಡಿಲ್ಲ. ದಯವಿಟ್ಟು ಅದರ ಬಗ್ಗೆ ಏನಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ಹೆರ್ತ್ ಸೆಕ್ರೆಟರಿಯವರಿಗೆ ಕಳುಹಿಸಿಕೊಡಿ ಎಂದು ನಾನು ಹೇಳಿದ್ದೇನೆ ಮತ್ತು ನಮ್ಮ ಸೆಕ್ರೆಟರಿಯವರೂ ಕೂಡ ಕಾಗದ ಬರೆದಿದ್ದಾರೆ. ಅಲ್ಲಿಂದ ಉತ್ತರ ಬಂದಮೇಲೆ ಅದನ್ನು ಈ ಸಭೆಯಲ್ಲಿ ಪ್ಲೇಸ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾವು ಏಷ್ಟು ಹೇಳಿದರೂ ಇನ್ನೂ ತರಿಸಿಲ್ಲ ಎಂದರೆ ನಾವು ಏನು ತಿಳಿದುಕೊಳ್ಳಬೇಕು ? ಮೇಯರ್, ಕಮೀಷನರ್ ಎಲ್ಲರೂ ಇಲ್ಲೇ ಇದ್ದಾರೆ. ಇಷ್ಟು ಹತ್ತಿರ ಇದ್ದರೂ ಇನ್ನೂವರೆಗೆ ತಾವು ತರಿಸಿಕೊಡುವುದಕ್ಕಾಗುವುದಿಲ್ಲವೇ ಎಂದರೆ ನಿಮಗೆ ಸಿಟ್ಟು ಬರುತ್ತದೆ.

ಅಧ್ಯಕ್ಷರು.—ನಿಮ್ಮ ಮೇಲೆ ನನಗೆ ಸಿಟ್ಟು ಏನು ಇಲ್ಲ. ಪ್ರೊಸೀಜರ್ ಪ್ರಕಾರ ನಮ್ಮ ಸೆಕ್ರೆಟರಿಯವರು, ಹೆರ್ತ್ ಸೆಕ್ರೆಟರಿಯವರಿಗೂ, ಮುನಿಸಿಪಲ್ ಸೆಕ್ರೆಟರಿಯವರಿಗೂ, ಕಾಗದ ಬರೆದಿದ್ದಾರೆ. ಅಲ್ಲಿಂದ ಬಂದ ಮೇಲೆ ಇಡುತ್ತೇನೆ. ಇಷ್ಟು ಹೇಳಿದರೂ ನೀವು ನನ್ನನ್ನು ತರಿಸಿಲ್ಲ, ತರಿಸಿಲ್ಲ ಎಂದು ಹೇಳಿ ಧಾರ್ಜು ಮಾಡುತ್ತೀರಾ.

ಶ್ರೀ ವಾಟಾಳ್ ನಾಗರಾಜ್.—ನೀವು ಕೋಪ ಏತಕ್ಕೆ ಮಾಡಿಕೊಳ್ಳುತ್ತೀರಿ ? ಈಗೊತ್ತೇ ಬರೆದು ಅವರಿಂದ ತರಿಸಿಕೊಳ್ಳುವ ಕೆಲಸ ಮಾಡಿ ಎಂದು ಹೇಳಿದೆ.

ಅಧ್ಯಕ್ಷರು.—ನಾನೂ ಅದೇ ಹೇಳಿದ್ದು. ಅವರಿಗೆ ಬರೆದಿದ್ದೇನೆ ಉತ್ತರ ಬರುತ್ತದೆ ಎಂದು.

ಶ್ರೀ ಹೆಚ್. ಡಿ. ದೇವೆಗೌಡ (ಹೊಳೆನರಸೀಪುರ).—ಮಾನ್ಯ ಸಿದ್ದಪ್ಪನವರು ಹೇಳತಕ್ಕಂಥ ವಿಷಯ ಈವೊತ್ತೆ ಕೊನೆ ದಿವಸವಾಗಿರುವುದರಿಂದ ಈ ಸಭೆಯ ಕಾರ್ಯಕಲಾಪಗಳಲ್ಲಿ ಯಾವುದಾದರೂ ಒಂದು ವೇಳೆಯಲ್ಲಿ ತಮ್ಮ ಅನುಮತಿ ಪಡೆದು ವಿದ್ಯಾ ಮಂತ್ರಿಗಳು ಇದರ ಬಗ್ಗೆ ಹೇಳಬೇಕು.

ಇನ್ನೊಂದು ವಿಷಯ. ಕಾರ್ಪೊರೇಷನ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ತರಿಸಬೇಕು ಎನ್ನುವ ಬಗ್ಗೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಬಹುಶಃ ಈ ಡಿಮ್ಯಾಂಡ್‌ಗಳ ಮೇಲೇನೇ ಈಗ ಮಾತನಾಡಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇರುವುದರಿಂದ, ಡಿಮ್ಯಾಂಡ್ ಮುಗಿದ ಮೇಲೆ ಆ ನಬ್ಜೆಕ್ಟನ್ನು ತೆಗೆದುಕೊಳ್ಳೋಣ.

ಇನ್ನೊಂದು ವಿಷಯ ಏನೆಂದರೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳ ಮೇಲೆ ನಾನು ಎರಡು ಹಕ್ಕುಭಾದ್ಯತೆ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಇದು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂಥ ದಾಖಲೆಗಳು ತರಿಸಿಕೊಂಡರೆ 15ನೇ ತಾರೀಖು ಆದಮೇಲೆ ತಮ್ಮ ಅನುಮತಿ ಪಡೆದೇನೇ ಯಾವತ್ತಾದರೂ ಒಂದು ದಿನ ಇದನ್ನು ಇಟ್ಟುಕೊಳ್ಳೋಣ.

Question of Privilege motion against the Engineer-in-Chief and Additional Secretary to Government, P.W.D.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಶ್ರೀ ಚೆನ್ನಬಸಪ್ಪನವರು ಒಂದು ಆಶ್ವಾಸನೆ ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಪೂರ್ತಿ ಮಾಡುತ್ತೀರಾ ? ಮಾಡಿದರೆ ಯಾವತ್ತು ಮಾಡುತ್ತೀರಾ ಎನ್ನುವುದನ್ನು ತಿಳಿಸಬೇಕು.